# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 581+582 |
| ಮಾನ್ಯ ಸದಸ್ಯರ ಹೆಸರು | : | ಡಾ: ಚಂದ್ರಶೇಖರ ಬಿ.ಪಾಟೀಲ್<br>(ಪದವೀಧರರ ಕ್ಷೇತ್ರ) ಹಾಗೂ<br>ಶ್ರೀ ಎಂ.ಎ.ಗೋಪಾಲಸ್ವಾಮಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |
| ಉತ್ತರಿಸಬೇಕಾದ ದಿನಾಂಕ | : | 13.12.2018 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 2006ರ ನಂತರ ನೇಮಕಾತಿ ಹೊಂದಿದ ನೌಕರರುಗಳಿಗೆ ಮತ್ತು ಶಿಕ್ಷಕರುಗಳಿಗೆ ಹಳೆ ಪಿಂಚಣಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2006ರ ನಂತರ ನೇಮಕಾತಿ ಹೊಂದಿದ ಸರ್ಕಾರಿ ನೌಕರರುಗಳಿಗೆ ಹಳೆ ಪಿಂಚಣಿ ಬದಲಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. |
| (ಆ) | ಹಳೆಯ ಪಿಂಚಣಿ ವ್ಯವಸ್ಥೆಯನ್ನು ಯಥಾವತ್ತಾಗಿ ಜಾರಿಗೊಳಿಸಲು ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆಯೇ; ಯಾವ ರೀತಿ ಹಳೆಯ ಪಿಂಚಣಿ ಪದ್ಧತಿ ಜಾರಿಗೊಳಿಸಲಾಗುತ್ತದೆ; | ಸದರಿ ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ ಮಾರ್ಪಾಡು ಮಾಡಲು ಸರ್ಕಾರವು ದಿನಾಂಕ:11.12.2018ರಂದು ಆಇ 107 ಪಿಇಎನ್ 2018ರ ಆದೇಶದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ.<br><br>ಸದರಿ ಅಧಿಕಾರಿಗಳ ಸಮಿತಿಯು ನೀಡುವ ವರದಿಯನ್ನು ಸರ್ಕಾರವು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. |
| (ಇ) | 2006ರ ನಂತರ ನೇಮಕವಾದ ನೌಕರರಿಗೆ ಜಿ.ಪಿ.ಎಫ್. ವ್ಯವಸ್ಥೆ ಕಲ್ಪಿಸುವ ವ್ಯವಸ್ಥೆ ಜಾರಿಗೆ ತರಲಾಗಿದೆಯೇ; | ಸರ್ಕಾರದ ಪರಿಶೀಲನೆಯಲ್ಲಿದೆ. |
| ಈ) | ಈ ಯೋಜನೆಯಲ್ಲಿ ಮರಣ ಮತ್ತು ನಿವೃತ್ತಿಯಾದ ನೌಕರರಿಗೆ ಎಷ್ಟು ಪಿಂಚಣಿ ನಿಗದಿ ಮಾಡಲಾಗಿದೆ ಮತ್ತು ಎಷ್ಟು ಆರ್ಥಿಕ ಸೌಲಭ್ಯ ನೀಡಲಾಗಿದೆ; (ಸಂಪೂರ್ಣ ವಿವರ ನೀಡುವುದು) | 1. ಎನ್.ಪಿ.ಎಸ್. ಯೋಜನೆಯಡಿ ನೌಕರರು ಸೇವೆಯಲ್ಲಿರುವಾಗಲೇ ಮೃತರಾದರೆ ಸರ್ಕಾರದಿಂದ ನೌಕರರ ಕುಟುಂಬಕ್ಕೆ ಈ ಕೆಳಕಂಡ ಸೌಲಭ್ಯವನ್ನು ನೀಡಲಾಗುವುದು.<br>i. ದಿನಾಂಕ 31.03.2018 ರವರೆಗೆ ಸೇವೆಯಲ್ಲಿರುವಾಗಲೇ ಮೃತರಾದ ಸರ್ಕಾರಿ ನೌಕರರ ಕುಟುಂಬಕ್ಕೆ ಇಡಿಗಂಟಿನ ಪರಿಹಾರವನ್ನು ಸರ್ಕಾರದ ಆದೇಶ ಸಂ: ಆಇ/03/ಸೇನಿಸೇ/2010 ದಿನಾಂಕ: 12.10.2010, 15.10.2011 ರನ್ವಯ ನೀಡಲಾಗುವುದು.<br>ii. a. ದಿನಾಂಕ 01.04.2018ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ ಸರ್ಕಾರಿ ನೌಕರರ ಕುಟುಂಬಕ್ಕೆ ಮರಣ ಉಪದಾನವನ್ನು ಸರ್ಕಾರದ ಆದೇಶ ಸಂಖ್ಯೆ:ಆಇ/34/ಪಿ.ಇ.ಎನ್/2018, ದಿನಾಂಕ: 23.06.2018, ರನ್ವಯ ನೀಡಲಾಗುವುದು.<br>b. ಮೃತ ನೌಕರರ ನಾಮನಿರ್ದೇಶಿತರು ಸರ್ಕಾರದ ಆದೇಶ ಸಂಖ್ಯೆ:ಆಇ/34/ ಪಿ.ಇ.ಎನ್/2018, ದಿನಾಂಕ: 23.06.2018, |

| | | |
|---|---|---|
| | | ರನ್ವಯ ಪ್ರಾನ್ ಖಾತೆಯಲ್ಲಿ ಕ್ರೋಢೀಕೃತ ವಾಗಿರುವ ಸಂಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡಿ "ಕುಟುಂಬ ಪಿಂಚಣಿ ನಿಯಮಗಳು, 2002" ರನ್ವಯ ಕುಟುಂಬ ಪಿಂಚಣಿಯನ್ನು ಪಡೆಯಬಹುದು. ಈ ಆಯ್ಕೆಯು ಐಚ್ಛಿಕವಾಗಿದ್ದು, ಒಮ್ಮೆ ಮಾಡಿಕೊಂಡ ಆಯ್ಕೆಯನ್ನು ಬದಲಿಸಲು ಅವಕಾಶವಿರುವುದಿಲ್ಲ.<br>2. ಎನ್.ಪಿ.ಎಸ್ ನೌಕರರು ಸೇವೆಯಿಂದ ನಿವೃತ್ತರಾಗುವ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಆಇ/34/ಪಿ.ಇ.ಎನ್/2018, ದಿನಾಂಕ:23.06.2018, ರನ್ವಯ ನಿವೃತ್ತಿ ಉಪದಾನವನ್ನು ದಿನಾಂಕ:01.04.2018 ರಿಂದ ಜಾರಿಗೊಳಿಸಲಾಗಿರುತ್ತದೆ.<br>3. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ (ಎಸ್.ಪಿ.ಎಲ್) 203 ಪಿಇಎನ್ 2012 (ಪಿ), ದಿನಾಂಕ:18.05.2016 ರಂತೆ ಎನ್.ಪಿ.ಎಸ್. ಯೋಜನೆಯಡಿ ನೌಕರರು ನಿವೃತ್ತರಾದರೆ/ ಸೇವೆಯಲ್ಲಿರುವಾಗಲೇ ಮೃತರಾದರೆ ಆ ಸಂದರ್ಭದಲ್ಲಿ ಅವರುಗಳ ಪ್ರಾನ್ ಖಾತೆಯಲ್ಲಿನ ಮೊತ್ತವನ್ನು ಈ ಕೆಳಕಂಡಂತೆ ಇತ್ಯರ್ಥಪಡಿಸ ಲಾಗುವುದು. |
| | | a. ನೌಕರರು ಸೇವೆಯಲ್ಲಿರುವಾಗಲೇ ಮೃತರಾದರೆ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ನಾಮ ನಿರ್ದೇಶಿತರಿಗೆ ಇತ್ಯರ್ಥಪಡಿಸಲಾಗುವುದು.<br>b. ಎನ್.ಪಿ.ಎಸ್. ಯೋಜನೆಯಡಿ ನಿವೃತ್ತಿ ಹೊಂದಿದ ನೌಕರರ ಪ್ರಾನ್ ಖಾತೆಯಲ್ಲಿ 2.00 ಲಕ್ಷಕ್ಕಿಂತ ಕಡಿಮೆ ಮೊತ್ತವಿದ್ದರೆ ನೌಕರರಿಗೆ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು ಹಾಗೂ ಪ್ರಾನ್ ಖಾತೆಯಲ್ಲಿನ ಮೊತ್ತವು ಎರಡು ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ ಪ್ರಾನ್ ಖಾತೆಯಲ್ಲಿರುವ 60% ಮೊತ್ತವನ್ನು ನೌಕರರು ಹಿಂಪಡೆಯಬಹುದಾಗಿದ್ದು ಉಳಿದ 40% ಮೊತ್ತವನ್ನು ಮಾಸಿಕ ಪಿಂಚಣಿಗಾಗಿ ASP ಯಲ್ಲಿ ಹೂಡಿಕೆ ಮಾಡಬೇಕಿರುತ್ತದೆ. |
| (ಉ) | ರಾಜ್ಯ ಸರ್ಕಾರಿ ನೌಕರರು ಎನ್.ಪಿ.ಎಸ್. ಯೋಜನೆಯನ್ನು ಕೈಬಿಟ್ಟು ಹಳೆ ಪಿಂಚಣಿ ವ್ಯವಸ್ಥೆ ಜಾರಿ ಮಾಡುವಂತೆ ನಡೆಸಿರುವ ಪ್ರತಿಭಟನೆಗಳು ಮತ್ತು ಸದರಿ ನೌಕರರ ಸಂಘಗಳು ಮಾಡಿರುವ ಮನವಿಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು; | ಬಂದಿದೆ. ಈ ಹಿನ್ನಲೆಯಲ್ಲಿ ಸದರಿ ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ ಮಾರ್ಪಾಡು ಮಾಡಲು ಸರ್ಕಾರವು ದಿನಾಂಕ:11.12.2018ರಂದು ಆಇ 107 ಪಿಇಎನ್ 2018ರ ಆದೇಶದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ. ಸದರಿ ಅಧಿಕಾರಿಗಳ ಸಮಿತಿಯು ನೀಡುವ ವರದಿಯನ್ನು ಸರ್ಕಾರವು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು |
| (ಊ) | ರಾಜ್ಯ ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ವ್ಯವಸ್ಥೆ ಜಾರಿ ಮಾಡಿದ್ದಲ್ಲಿ ಸರ್ಕಾರಕ್ಕೆ ಆಗಬಹುದಾದ ಲಾಭ–ನಷ್ಟಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆ; ನಡೆಸಿದ್ದಲ್ಲಿ ಲಾಭ ನಷ್ಟಗಳ ವಿವರ ನೀಡುವುದು; | ಇಲ್ಲ |

| | | |
|---|---|---|
| (ಋ) | ರಾಜ್ಯದಲ್ಲಿ ಎಷ್ಟು ಸರ್ಕಾರಿ ನೌಕರರು ಎನ್.ಪಿ.ಎಸ್. ಯೋಜನೆಗೆ ಒಳಪಡುತ್ತಾರೆ; ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿರುವ ಎನ್.ಪಿ.ಎಸ್. ಯೋಜನೆಯನ್ನು ಹಿಂಪಡೆದು ಹಳೆಯ ಪಿಂಚಣಿ ವ್ಯವಸ್ಥೆಯನ್ನು ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು? (ವಿವರ ನೀಡುವುದು) | ಹೆಚ್.ಆರ್.ಎಂ.ಎಸ್. ಮಾಹಿತಿ ಪ್ರಕಾರ ಎನ್.ಪಿ.ಎಸ್. ಯೋಜನೆ ವ್ಯಾಪ್ತಿಗೆ ಒಳಪಡುವ ನೌಕರರ ಸಂಖ್ಯೆ:2,06,862.<br><br>ಸದರಿ ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ ಮಾರ್ಪಾಡು ಮಾಡಲು ಸರ್ಕಾರವು ದಿನಾಂಕ:11.12.2018ರಂದು ಆಇ 107 ಪಿಇಎನ್ 2018ರ ಆದೇಶದಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ. ಸದರಿ ಅಧಿಕಾರಿಗಳ ಸಮಿತಿಯು ನೀಡುವ ವರದಿಯನ್ನು ಸರ್ಕಾರವು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. |

**ಸಂಖ್ಯೆ:ಆಇ(ವಿ) 96 ಪಿಇಎನ್ 2018**

**(ಹೆಚ್.ಡಿ.ಕುಮಾರಸ್ವಾಮಿ)**
ಮುಖ್ಯಮಂತ್ರಿ